ಫೋನ್ ಕಟ್ ಮಾಡಿದ.

ನಿಶ್ಚಲನಾಗಿ ಕೂತ. ಎಷ್ಟೋ ಹೊತ್ತಾದ ಮೇಲೆ ಎದ್ದು ರೂಮಿಗೆ ಹೋದ. ಶೀಲಾ ತನ್ನ ಪಾಡಿಗೆ ತಾನು ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿದ್ದಳು. ಸವಿನಿದ್ದೆಯಲ್ಲಿದ್ದ ಮಗಳನ್ನೇ ನೋಡಿದ. ನಿಜವಾಗಿಯೂ ಈ ತಾಟಗಿತ್ತಿ ಜೊತೆ ಮಲಗಿ ಈ ಮಗುವನ್ನು ಮಾಡಿದೆನೇ ಅಂತ ಕೇಳಿಕೊಂಡ. 'ಗ್ರೇಟ್' ಅಂದುಕೊಂಡ.

ಬೆಸೆದುಕೊಂಡ ಕೈಗಳನ್ನು ತಲೆಯ ಕೆಳಗಿಟ್ಟುಕೊಂಡು ಅಂಗಾತ ಮಲಗಿದ. ನಿದ್ದೆ ಹತ್ತಿರ ಸುಳಿಯಲಿಲ್ಲ. ಎಣಿಸಲು ಹೆಂಚುಗಳೂ ಇಲ್ಲವಲ್ಲ ಅನ್ನಿಸಿತು. ಹೆಂಚಿನ ನೆನಪು ಬಂದದ್ದಕ್ಕೆ ನಕ್ಕ.

ಯಾಕೋ ಅನು ಹತ್ತಿರ ಬಂದು 'ಶಶೀ' ಅಂತ ಮೆಲ್ಲನೆ ಕರೆದಂತಾಯಿತು. 'ಮೈ ಹುಷಾರಿಲ್ಲವಾ?' ಅಂತ ಕೇಳುತ್ತ ಹಣೆಯಮೇಲೆ ಕೈ ಇಟ್ಟಂತಾಯಿತು. ಅಮ್ಮನ ಕುರಿತು ಎಲ್ಲವನ್ನೂ ಹೇಳಿಕೊಳ್ಳೋಣವೆನ್ನಿಸಿತು. ಮತ್ತೆ, ಛೆ, ನನ್ನ ತಾಪತ್ರಯವನ್ನೆಲ್ಲಾ ಅವಳಿಗೆ ಯಾಕೆ ಹೇಳಿಕೊಳ್ಳಲಿ ಅಂತ ತನ್ನನ್ನು ತಾನೇ ಪ್ರಶ್ನಿಸಿಕೊಂಡ. ಬೇಡ ಬೇಡ ಅದನ್ನೆಲ್ಲಾ ಹೇಳೋದು ಬೇಡ ಅಂದುಕೊಂಡ.

ಅಮ್ಮನ ನೆನಪು ಬಂದ ಕೂಡಲೇ ಅಮ್ಮ ಫೋನಿನಲ್ಲಿ ಮಾತನಾಡಿದ್ದು ಕಿವಿಯಲ್ಲಿ ರಿಂಗಣಿಸಿತು. ಅದರ ಜೊತೆಯಲ್ಲೇ, 'ಅಮ್ಮ ಯಾವುದೋ ಫೋನ್ ಬರ್ತಾ ಇದೆ. ನಮ್ಮ ಬಾಸ್ ಕರೀತಾ ಇದ್ದಾರೆ ಅಂತ ಕಾಣತ್ತೆ. ನಾನು ಆಮೇಲೆ ಫೋನ್ ಮಾಡ್ತೀನಮ್ಮ' ಅಂತ ಫೋನ್ ಕಟ್ ಮಾಡಿದ್ದೂ ನೆನಪಿಗೆ ಬಂತು.

ಆ 'ಆಮೇಲೆ' ಬರಲೇ ಇಲ್ಲ.

ಆಮೇಲೆ ಅಮ್ಮನಿಂದ ಫೋನೂ ಇಲ್ಲ. ಅಮ್ಮನ ನೆನಪು ಪ್ರತಿ ಕ್ಷಣವೂ ಅವನನ್ನು ಚುಚ್ಚುತ್ತಿತ್ತು. ಮೂವತ್ತನೆ ತಾರೀಖಿಗೆ ಅಂತೂ ಇಂತೂ ಪ್ರಾಜೆಕ್ಟ್ ಮುಗಿಸಿದ. ಮಾರನೆ ದಿನ ಅಮ್ಮನಿಂದ ಫೋನ್ ಬಂತು. 'ಶಶೀ, ನೀನು ಫೋನ್ ಮಾಡದೇ ಇದ್ದದ್ದೇ ಒಳ್ಳೇದಾಯ್ತು ಕಣಪ್ಪ. ಕಯ್ಯಿ ಈಗ ಎಷ್ಟೋ ಮೇಲು. ನೀನೇನು ಅದೇ ಕೆಲಸವಾಗಿ ಇಲ್ಲಿಗೆ ಬರೋಕೆ ಹೋಗಬೇಡ. ಬಿಡುವಿದ್ದಾಗ ಒಂದು ಸಲ ಬಂದುಹೋಗು. ಆಯ್ತಾ? ನಿನ್ನ ಆರೋಗ್ಯ ನೋಡಿಕೋ. ಟೆನ್ಶನ್ ಮಾಡಿಕೋಬೇಡ. ಹೊತ್ತುಹೊತ್ತಿಗೆ ಸರಿಯಾಗಿ ಊಟ ಮಾಡು' ಅಂದಳು. ಎಲ್ಲವನ್ನೂ ಕೇಳಿಸಿಕೊಂಡ ಶಶಿಧರ 'ಆಯ್ತುಮ್ಮ' ಎಂದಷ್ಟೇ ಹೇಳಿದ.

ಅವನ ಕೈಲಾಗಿದ್ದೂ ಅಷ್ಟೇ.

## 'ಗೌತಮ'

ಕೋಲಾರದ ಪುತ್ತನೂರಿನವರಾದ ಎಸ್. ರಾಮಮೂರ್ತಿ 'ಗೌತಮ' ಎಂಬ ಹೆಸರಿನಲ್ಲಿ ತಮ್ಮ ಬರಹಗಳನ್ನು ಪ್ರಕಟಿಸುತ್ತ ಬಂದ ಲೇಖಕ. ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. (ಕನ್ನಡ), ಎಂ.ಐ.ಇ (ಮೆಕ್ಯಾನಿಕಲ್ ಎಂಜಿನಿಯರಿಂಗ್) ಪದವಿ ಪಡೆದಿದ್ದಾರೆ. ಬೆಂಗಳೂರಿನ ಬಿ.ಇ.ಎಲ್‌ನಲ್ಲಿ 38 ವರ್ಷ ಸೇವೆ ಸಲ್ಲಿಸಿದ್ದಾರೆ. ಕತೆ, ಹಾಸ್ಯ ಬರಹಗಳು ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ನಾಲ್ಕು ಕಥಾಸಂಕಲನ, ಮೂರು ಕಾದಂಬರಿ, ಐದು ಹಾಸ್ಯಸಂಕಲನಗಳು ಪ್ರಕಟವಾಗಿವೆ. ಸುಮಾರು 20 ಪುಸ್ತಕಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.